ಕಥೆ

# ಗಂಗಾ ಕಲ್ಯಾಣ



**ಸೋಮಶೇಖರ್ ಕದಿರೇಹಳ್ಳಿ**

ಕಲೆ: ರೂಪಶ್ರೀ ಕಲ್ಲಿಗನೂರು

ಬೆಳ್ಳಂಬೆಳಿಗ್ಗೆ ಕತ್ತಲು ಇನ್ನೂ ಮಸ್ಕಮಸಕು ಕಲ್ಲಳ್ಳಿಯ ಊರೊಳಗಿನ ದೇವಸ್ಥಾನದ ಮೈಕು ಭಕ್ತಿಗೀತೆಯೊಂದನ್ನ ಮೆಲುದನಿಯಲ್ಲಿ ಹಾಡಿಕೊಳ್ಳುತ್ತಾಯಿತ್ತು. ಇತ್ತ ಊರಿನ ತೆಂಕ ದಿಕ್ಕಿನ ಕೊನೆಗಿರುವ ಹಟ್ಟಿಯಲ್ಲಿ ಅಲ್ಲೊಂದ್ ಅಲ್ಲೊಂದ್ ಮಾತುಗಳು, ಕೆಮ್ಮುಗಳು ಕತ್ತಲೊಳಗಿಂದಲೇ ಸೀಳಿ ಹೊರಬರುತ್ತಿದ್ದವು. ಅಷ್ಟು ಹೊತ್ತಿಗೆ ಗಲ್ಲೇಗುಡಿ ಪಕ್ಕದ ಮನೆಯ ಹನುಮಪ್ಪ ಎದ್ದು ಕೊಟ್ಗೆಯಿಂದ ದನಗಳ್ನ ಹೊರಕ್ಕೆ ಕಟ್ಟಿ ಕಸ ಬಾಸಿ ಕೈಕಾಲು ಮುಖ ತೊಳಕೊಂಡು ಹೆಂಡ್ತಿ ಸಾಕಮ್ಮನ ಎಳಿಸಿ 'ಏ ಪೆಟ್ಕೆಗಿರೋ ಆ ಪಂಚೆ, ಶರ್ಟ್‌ನ ಕೊಡು ಚಂದ್ರಾಪುರದ ನಿಂಗೇಗೌಡ್ರು ತಾವ ಒಸಿ ಮಾತಾಡೋದು ಇತ್ತು, ಮಾತಾಡಿಸ್ಕೊಂಡು ಉಂಬೊ ಹೊತ್ತಿಗೆ ಬಂದು ಹೊಲದ ಕಡಿಗೆ ಹೋಗ್ತಿನಿ' ಅಂದ ಹನುಮಪ್ಪಂಗೆ ಹೆಂಡ್ತಿ ಸಾಕಮ್ಮ ದೇವರ ಫೋಟೋದ ಹಿಂದೆ ಇಟ್ಟಿದ್ದ ಬೀಗದ ಕೈ ತಕ್ಕಂಡು ಪೆಟ್ಗೆ ತೆಗ್ದು, ಒಗದು ಇಟ್ಟಿದ್ದ ಬಟ್ಟೆನ ಗಂಡನ ಕೈಗೆ ಕೊಟ್ಟು, 'ಕಾಪಿ ಕಾಸ್ತಿನಿ ಕುಡ್ಕಂಡೋಗು' ಅಂದ ಹೆಂಡ್ತಿ ಮಾತಿಗೆ, 'ಇಲ್ಲ ಇಲ್ಲ ನೀನು ಲಕ್ಕಪ್ಪರ ಮನೆಗೋಗಿ ಹಾಲ ತಂದು ಕಾಸೋ ಹೊತ್ತಿಗೆ ಹೊತ್ತೆ ಆಗ್ಬಿಡುತ್ತೆ ನಾ ಕಾಯಕಾಗಲ್ಲ ಹೋಗ್ತಿನಿ' ಎಂದು ಒಂದೇ ಅವಸರಕ್ಕೆ ಪಂಜೆ ಸುತ್ಕೊಂಡು ಅಂಗಿ ಇಟ್ಕೊಳ್ಳುತ್ತಲೇ ಹೊರಗೆ ಬಂದು ಚೆಪ್ಪಲಿ ಹಾಕ್ಕೊಂಡು ಮನೆ ಬಿಟ್ಟು ಹಟ್ಟಿಬೀದಿಲಿ ನಡೀತಾ ರಸ್ತೆ ಸೇರಿ ಊರೊಳಗಿನ ಬಸ್ಟಾಂಡ್ ತಾವ ಬಂದು ಬಸ್ಸು ಕಾಯ್ತ ನಿಂತಿದ್ದ. ಈ ಕಲ್ಲಳ್ಳಿಗೆ ಇನ್ನು ಕತ್ತಲಿದ್ದಂಗೆ ಬರೋ ಬಸ್ಸೆಂದರೆ ಚಂದ್ರಾಪುರ ಮೂಲಕ ಹೊರಟು ಪಟ್ಣುದ್ ಕಡಿಗೆ ಹೋಗ್ತಯಿದ್ದ 'ಮಹದೇವ' ಬಸ್ಸು ದೂರದಿಂದಲೇ ಬೆಳಕಾಕ್ಕೊಂಡು ಬುರ್ರ್ರೋ ಎಂದು ಸದ್ದ ಮಾಡ್ಕೊಂಡು ಬಂದೇ ಬಿಟ್ಟು, ಆ ಬಸ್ಸಿಗೆ ಹತ್ತಿ ಚಂದ್ರಾಪುರಕ್ಕೆ ಟಿಕೆಟ್ ತಕ್ಕಂಡು ಕೂತ್ಕಂಡ. ಬಸ್ಸು ಚಂದ್ರಾಪುರದ ಕಡೆಗೆ ನುಗ್ಗಿ ಹೋಗ್ತಯಿದ್ರೆ ಹನುಮಪ್ಪನ ತಲೆಯಲ್ಲಿ ಈ ಹಿಂದಿನ ದಿನ ನಂಜಪ್ಪನ ತೋಟದ ಹತ್ತಿರ ನಡೆದ ಗಲಾಟೆ ಎದೆ ಕುಕ್ಕಿ ಕುಕ್ಕಿ